ಭತ್ತದ ಬೆಲೆ ಬಿದ್ರೂ ಅಕ್ಕಿ ಮಾಡಿಸಿ ರೈತರು ಗೆದ್ರು!

ಭತ್ತದ ದರ ಕುಸಿದರೂ ದಲ್ಲಾಳಿಗಳಿಂದಾಗಿ ಇಳಿಯದ ಅಕ್ಕಿ ಬೆಲೆ | ಅಕ್ಕಿ ಮಾಡಿಸಿ, ತಾವೇ ದರ ನಿಗದಿಪಡಿಸಿದ ರೈತರು

ಮೂಟೆಗಟ್ಟಲೇ ಅಕ್ಕಿ ಮಾರಾಟ ಮಾಡಿ ಕ್ವಿಂಟಲ್‌ಗೆ ₹800 ಹೆಚ್ಚುವರಿ ಲಾಭ ಪಡೆದ ಕಲ್ಯಾಣ ಭಾಗದ ಅನ್ನದಾತರು

• ಸೋಮರಡ್ಡಿ ಅಳವಂಡಿ
ಕನ್ನಡಪ್ರಭ ವಾರ್ತೆ ಕೊಪ್ಪಳ

ಉತ್ಪನ್ನಗಳಿಗೆ ತಾವೇ ದರ ನಿಗದಿ ಮಾಡಿಕೊಳ್ಳುವಂತಾಗಬೇಕು. ಅಲ್ಲಿಯವರೆಗೂ ಉದ್ಧಾರ ಆಗುವುದಿಲ್ಲ ಎನ್ನುವುದನ್ನು ಅರ್ಥ ಮಾಡಿಕೊಂಡಿರುವ ಭತ್ತ ಬೆಳೆದ ರೈತರು ಭತ್ತಕ್ಕೆ ತಾವೇ ದರ ನಿಗದಿ ಮಾಡಿದ್ದಾರೆ. ಅಷ್ಟೇ ಅಲ್ಲ, ಅಕ್ಕಿಯನ್ನು ತಾವೇ ಮಾಡಿಸಿ, ಮಾರುವ ಮೂಲಕ ದರ ಕುಸಿತದ ನಡುವೆಯೂ ಎದ್ದು ನಿಂತಿದ್ದಾರೆ. ಬಿದ್ದ ಮಾರುಕಟ್ಟೆ, ದರದ ನಡುವೆಯೂ ಗೆದ್ದು ಬೀಗಿದ್ದಾರೆ.

ಹೌದು, ಪ್ರಸಕ್ತ ವರ್ಷ ರೈತರು ಭತ್ತ ಇನ್ನೇನು ಮಾರುಕಟ್ಟೆಗೆ ಬರುವಂತಾಗುತ್ತಿದ್ದಂತೆ ಮಾರುಕಟ್ಟೆಯಲ್ಲಿ ಭತ್ತದ ದರ ಪಾತಾಳಕ್ಕೆ ಕುಸಿಯಿತು. ಆದರಕ್ಕೆ ಮಾರಿದ್ದರೆ ಕೃಷಿಗೆ ಮಾಡಿದ ಖರ್ಚು ಕೂಡ ಬರುತ್ತಿಲ್ಲ. ಆದರೆ, ಭತ್ತದ ದರ ಬಿದ್ದಿದ್ದರೂ



ರೈತರು ಭತ್ತ ಅಕ್ಕಿ ಮಾಡಿ, ಪ್ಯಾಕೆಟ್ ಮಾಡಿ, ಮನೆಯಲ್ಲಿಟ್ಟುಕೊಂಡಿರುವುದು.

- ಬೆಳೆದ ಭತ್ತಕ್ಕೆ ತಾವೇ ದರ ನಿಗದಿ ಮಾಡಿದ ರೈತರು
- ದರ ಕುಸಿತದಿಂದ ನಷ್ಟ ತಪ್ಪಿಸಲು ರೈತರಿಂದ ಭಿನ್ನ ಪ್ರಯೋಗ

ಅಕ್ಕಿಯ ದರ ಮಾತ್ರ ಕುಸಿದಿರಲಿಲ್ಲ (ದಲ್ಲಾಳಿಗಳ ಕೈಚಳಕದಿಂದ). ಹೀಗಾಗಿ, ರೈತರು ನಾವ್ಯಾಕೆ ಭತ್ತ ಮಾರಿ, ಕೈ ಸುಟ್ಟುಕೊಳ್ಳಬೇಕು ಎಂದು ತಾವೇ ಅಕ್ಕಿಯನ್ನು ಮಾಡಿಸಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಭತ್ತ ಬೆಳೆದ ರೈತರಿಗೂ ಲಾಭವಾಗಿದೆ ಮತ್ತು ಗ್ರಾಹಕರಿಗೂ ಲಾಭವಾಗಿದೆ. ಅಷ್ಟೇ ಅಲ್ಲ, ಗ್ರಾಹಕರಿಗೆ ಕಲಬೆರಕೆ ಇಲ್ಲದ ಗುಣಮಟ್ಟದ ಅಕ್ಕಿ ಕಡಿಮೆ ದರದಲ್ಲಿ ಸಿಕ್ಕಿದೆ.

ಪ್ರತಿ ಬಾರಿಯೂ ರೈತರ ಭತ್ತ ಮಾರುಕಟ್ಟೆಗೆ ಬರುವ ವೇಳೆಗೆ ಭತ್ತದ ದರ ಬರೋಬ್ಬರಿ ₹500-800 ವರೆಗೆ ಕುಸಿಯುತ್ತಿತ್ತು. ಆದರೆ, ಮಾರುಕಟ್ಟೆಯಲ್ಲಿ ಅಕ್ಕಿಯ ದರ ಮಾತ್ರ ಕುಸಿಯುತ್ತಿರಲಿಲ್ಲ. ಮಾರುಕಟ್ಟೆಯಲ್ಲಿ ಭತ್ತದ ದರವನ್ನು ಪಾತಾಳಕ್ಕೆ ದೂಡಿ, ಖರೀದಿಸುತ್ತಿದ್ದ ದಲ್ಲಾಳಿಗಳು ಅದನ್ನು ಮಿಲ್ಲಿನಲ್ಲಿ ಅಕ್ಕಿ ಮಾಡಿಸಿ, ಮಾರಿ ಭರ್ಜರಿ ಲಾಭ ಮಾಡಿಕೊಳ್ಳುತ್ತಿದ್ದರು. ಮಹಡಿ ಮೇಲೆ ಮಹಡಿ ಕಟ್ಟಿಸಿಕೊಳ್ಳುತ್ತಿದ್ದರು. ಆದರೆ, 4 ತಿಂಗಳು ಬೆವರು ಸುರಿಸಿ, ಬೆಳೆದ ರೈತರು ಮತ್ತೆ ನಷ್ಟ ಅನುಭವಿಸಿ, ಸಾಲದ ಸುಳಿಯಲ್ಲಿ ಸಿಲುಕುತ್ತಿದ್ದರು. ಆದರೆ, ಈ ವರ್ಷ ತಾವೇ ಮಾರುಕಟ್ಟೆ ಮಾಡಿಕೊಂಡಿರುವ ರೈತರು ಗೆದ್ದು ಬೀಗುತ್ತಿದ್ದಾರೆ.

ಈ ವರ್ಷ ತುಂಗಭದ್ರಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ ಭತ್ತದ ದರ ಕುಸಿದಿದ್ದರಿಂದ ರೈತರು ಧೃತಿಗೆಡಲಿಲ್ಲ. ಆದರೆ, ತಾವೇ ಅಕ್ಕಿ ಮಾಡಿಸಿ, ತಾವೇ ದರ ನಿಗದಿ ಮಾಡಿ ಮನೆಯಲ್ಲಿಯೇ ಮಾರಾಟ ಮಾಡುತ್ತಿದ್ದಾರೆ.

ಕ್ವಿಂಟಲ್‌ಗೆ ₹4000-4100, 4200ಗೆ ಮಾರಾಟ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ 75 ಕೇಜಿ ಚೀಲದ ಭತ್ತಕ್ಕೆ ₹2000 ಆಗುತ್ತದೆ. ಆದರೆ, ಮಾರುಕಟ್ಟೆಯಲ್ಲಿ 75 ಕೇಜಿ ಸೋನಾ ಮಸೂರಿ ಭತ್ತದ ದರ ₹1500ರಿಂದ 1600ಕ್ಕೆ ಕುಸಿದಿತ್ತು. (ಈಗ 1900 ಆಗಿದೆ). ಮಾರುಕಟ್ಟೆಯ ಮರ್ಮ ತಿಳಿದಿರುವ ರೈತರು 25 ಕೇಜಿ ಪಾಕೇಟ್ ಮಾಡಿಸಿ, ₹1000ಯಂತೆ (ಕ್ವಿಂಟಲ್‌ಗೆ ₹4000) ಮಾರಾಟ ಮಾಡುತ್ತಿದ್ದಾರೆ. ಇದೇ ಅಕ್ಕಿ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹4800-5000 ಇದೆ. ಗ್ರಾಹಕರಿಗೆ ಬರೋಬ್ಬರಿ ಕ್ವಿಂಟಲ್‌ಗೆ ₹800-1000 ಉಳಿತಾಯವಾಗುತ್ತದೆ. ಅಷ್ಟೇ ಅಲ್ಲ, ರೈತರಿಗೂ ಪ್ರತಿ ಕ್ವಿಂಟಲ್ ಗೆ ₹500 - 800 ಹೆಚ್ಚುವರಿ ಲಾಭವಾಗಿದೆ.

Kannadaprabha pg 07

For more information visit
University Library Website
Web - uasbagrilibindia.org
E-mail- librarian@uasbangalore.edu.in

Dec Hrd pg 03

City to host 'Organics & Millets' fair from Jan 23

BENGALURU, DHNS

The International Trade Fair 2025—Organics and Millets will take place at Palace Grounds in Bengaluru from January 23 to 25, Agriculture Minister N Cheluvarayaswamy announced on Monday.

Chief Minister Siddaramaiah will inaugurate the event at Tripura Vasini on January 23 at 11 am. As part of the inauguration, the chief minister will also lay the foundation stone for a Rs 20-crore organics and millets hub in Hebbal, Bengaluru, Cheluvarayaswamy said.

The trade fair aims to bring together farmers, farmer groups, domestic and international companies, and state and central agencies involved in the organics and millets sector.

The event will provide a platform to explore new opportunities and establish effective market linkages, the minister stated.

The fair will host over 300 stalls and feature lectures by 30 national and international speakers on topics related to organics and millets.



The 2024 edition of the fair in Bengaluru. DH FILE PHOTO

"The government's goal is to popularise organic and millet-based foods as traditional, conscious dietary choices that support future generations. Additionally, we aim to cultivate and preserve traditional native crop varieties for the future," Cheluvarayaswamy said.

Karnataka has been promoting organic farming as a sustainable alternative for the past two decades and organised its first organics and millet trade fair in 2017.

The minister also said Rs 106 crore in financial assistance has been disbursed to farmers to date.

2025 likely to be a sweet year for mango growers

The Karnataka State Mango Development and Marketing Corporation, after a meeting with a technical committee, has predicted a total yield of 12 lakh to 13 lakh tonnes for 2025

Jahnavi T.R.
BENGALURU



During 2024, the price of mango reached over ₹200 a kg for many varieties as the supply from the State was not enough. FILE PHOTO

It is most likely going to be a sweet year for mango growers in Karnataka, as the weather has been conducive so far for the crop. This comes after several consecutive bad years owing to weather and pest problems. The Karnataka State Mango Development and Marketing Corporation (KSMDMC), after a meeting with a technical committee, has predicted a total mango yield of 12 lakh to 13 lakh tonnes for 2025.

While the corporation had predicted an average yield of around 10 lakh tonnes, the yield had dropped to a mere 30% owing to weather factors and pest attacks last year. Extreme heat had led to flowers withering away instead of becoming fruits.

"Mangoes require cool conditions for fruit formation and this year, the weather has been conducive. Even though flowering has been slightly delayed, we have predicted an on year, subject to weather not playing spoilsport. If there is no rain until fruits are formed, then by the second week of April, we will start seeing mangoes in the market. Those who treat their mangoes (for quick ripening) might bring their fruits earlier," said C.G. Nagaraju, managing director, KSMDMC.

As always, the mangoes from Ramanagara district and other areas are expected to hit the market first, followed by those from Kolar, Chickballapur, and North Karnataka. Despite good weather conditions, pest problems continue to pester mango growers. "We have issued advisories to control hoppers disease, inflorescence bud disease etc. We have also sent technical teams to all the districts to help the farmers," Mr. Nagaraju said.

While farmers are also hopeful this year, the cloudy conditions and light rain over the last few days have pushed them to worry. "We did not need this rain at this time as the flowers are close to fruit formation. If the weather improves over the next few days and there is enough heat in the upcoming weeks, then we might have a good year," said Dharanish Kumar, president, Kanakapura and Channapatna Mango Growers' Association.

The popular Badami and Senthura varieties are expected to be available before other varieties like Mallika, Bainganapalli, and Rasapuri. During 2024, the price of mangoes reached over ₹200 per kg for many varieties as the supply from the State was not nearly enough for the demand.

The rain on Sunday has worried growers in Kolar. "As it was just one day's rain, it did not have much impact. But if the cloudy conditions and rain continue, then it's going to cause the flowers to fall and impact the yield on a large scale," said Nalini Gowda, president, Karnataka Rajya Raitha Sangha, Kolar district.

Hindu Pg 02

Vijayavani Pg 05

ಅಂತಾರಾಷ್ಟ್ರೀಯ ವಾಣಿಜ್ಯ ಮತ್ತು ಸಾವಯವ, ಸಿರಿಧಾನ್ಯ ಮೇಳ | 23ರಿಂದ 3 ದಿನ ಅರಮನೆ ಮೈದಾನದಲ್ಲಿ ಆಯೋಜನೆ

ಸಾವಯವ, ಸಿರಿಧಾನ್ಯ ಕೃಷಿಗೆ ಸರ್ಕಾರದ ಉತ್ತೇಜನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಾವಯವ ಹಾಗೂ ಸಿರಿಧಾನ್ಯ ಕೃಷಿಗೆ ಉತ್ತೇಜನ ನೀಡುವ ಹಿನ್ನೆಲೆಯಲ್ಲಿ ಸರ್ಕಾರ 23ರಿಂದ ಮೂರು ದಿನ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ, ಸಾವಯವ ಮತ್ತು ಸಿರಿಧಾನ್ಯ-2025 ಆಯೋಜಿಸಿದೆ. ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಉದ್ಘಾಟಿಸಲಿದ್ದಾರೆ.



2017ರಿಂದ ಮೇಳ ಆಚರಿಸುತ್ತ ಬರಲಾಗಿದ್ದು, ಇದು 6ನೇ ಆವೃತ್ತಿಯಾಗಿದೆ. ಕೇಂದ್ರ ಕೃಷಿ ಮಂತ್ರಾಲಯ ಹಾಗೂ 25ಕ್ಕೂ ಹೆಚ್ಚು ರಾಜ್ಯಗಳಿಂದ ಹಿರಿಯ ಅಧಿಕಾರಿಗಳು, ಆ ರಾಜ್ಯದ ರೈತರು ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳೊಂದಿಗೆ ಭಾಗವಹಿಸಲಿದ್ದಾರೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಜರ್ಮನಿ, ಸ್ವಿಜರ್ಲೆಂಡ್, ಸ್ಪೇನ್, ಆಸ್ಟ್ರೇಲಿಯಾ, ಕೀನ್ಯಾ, ತಾಂಜೇನಿಯಾ, ಇಟಲಿ, ಪೆರು, ಇಂಗ್ಲೆಂಡ್ ಸೇರಿ 10ಕ್ಕೂ ಹೆಚ್ಚು ವಿವಿಧ ದೇಶಗಳಿಂದ ಉಪನ್ಯಾಸಕರು ಭಾಗವಹಿಸಲಿದ್ದಾರೆ ಎಂದರು.

ಸಾವಯವ ಮತ್ತು ಸಿರಿಧಾನ್ಯಗಳ ಅರಿವು ಮೂಡಿಸಲು ಸಿರಿಧಾನ್ಯ ಓಟ, ಸಿರಿಧಾನ್ಯ ಹಬ್ಬ ಹಾಗೂ ಸಿರಿಧಾನ್ಯ ಹಾಗೂ ಮರೆತುಹೋದ ಖಾದ್ಯಗಳ ಪಾಕ ಸ್ಪರ್ಧೆ ನಡೆಸಲಾಗಿದೆ ಎಂದು ಹೇಳಿದರು.

kannada matrimony
ವಧು ಅಥವಾ ವರರನ್ನು ಹುಡುಕಲು ಸಹಾಯ ಬೇಕೆ?
ನಮಗೆ ಕರೆ ಮಾಡಿ 70928 77888, ಸೋಂದಣಿ ಉಚಿತ!
ಕನ್ನಡಿಗರ ನಂ.1 ಆಯ್ಕೆ 24 ವರ್ಷಗಳಿಂದ

ಎಂಟು ರಾಜ್ಯಗಳ ಕೃಷಿ ಸಚಿವರು ಭಾಗಿ

ಅರುಣಾಚಲ ಪ್ರದೇಶ, ಹಿಮಾಚಲ ಪ್ರದೇಶ ಸೇರಿ ಎಂಟು ರಾಜ್ಯದ ಕೃಷಿ ಸಚಿವರು ಮೇಳದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ದೇಸಿ ತಳಿಗಳನ್ನು ಸಂರಕ್ಷಿಸುತ್ತಿರುವ ಆಯ್ದ 15 ಜಿಲ್ಲೆಗಳಿಂದ 30 ರೈತರನ್ನು ಆಹ್ವಾನಿಸಿದ್ದು, ಅವರು ರಕ್ಷಿಸಿರುವ ವಿವಿಧ ಬೆಳೆಗಳ ಬೀಜಗಳ/ ತೆನೆಗಳ ಪ್ರದರ್ಶನಕ್ಕೆ ಪ್ರತ್ಯೇಕ ದೇಶೀ ಪೆವಿಲಿಯನ್‌ಗೆ ಅವಕಾಶ ಕಲ್ಪಿಸಲಾಗಿದೆ ಎಂದು ಚಲುವರಾಯ ಸ್ವಾಮಿ ಹೇಳಿದರು.

ಆರು ಲಕ್ಷಕ್ಕೂ ಅಧಿಕ ಮಂದಿ ವೀಕ್ಷಣೆ

ತೈವಾನ್, ಹೈದರಾಬಾದ್ ಹಾಗೂ ಭುವನೇಶ್ವರದಲ್ಲಿ ಆಯೋಜಿಲಾಗಿದ್ದ ಅಂತಾರಾಷ್ಟ್ರೀಯ ವಿಚಾರಸಂಕಿರಣದಲ್ಲಿಯೂ ಮೇಳದ ಬಗ್ಗೆ ಪ್ರಚಾರ ನೀಡಲಾಗಿದೆ. ದೇಸಿ ತಳಿಗಳ ಮಹತ್ವ ಪ್ರಚಾರ ಮಾಡುವ ಸಲುವಾಗಿ 3 ಬಾರಿ ಗ್ರಾಮ್ಮಿ ಅವಾರ್ಡ್ ವಿಜೇತ ರಿಕಿ ಕೇಜ್ ಅವರಿಂದ ದೇಸಿ ತಳಿಗಳ ಗೀತೆಯನ್ನು ಸಂಯೋಜಿಸಲಾಗಿದ್ದು, ಮುಖ್ಯಮಂತ್ರಿಗಳು ಈ ಗೀತೆಯನ್ನು ಬಿಡುಗಡೆ ಮಾಡಿದ್ದಾರೆ. ಈ ಗೀತೆ ಬಿಡುಗಡೆಯಾದ ಕೇವಲ 3 ದಿನದಲ್ಲಿಯೇ 6 ಲಕ್ಷಕ್ಕೂ ಅಧಿಕ ವೀಕ್ಷಣೆ ಪಡೆದಿರುವುದು ದಾಖಲೆಯಾಗಿದೆ ಎಂದು ಚಲುವರಾಯಸ್ವಾಮಿ ತಿಳಿಸಿದರು.

ಮರೆತುಹೋದ ಖಾದ್ಯಗಳಿಗೆ ಮರುಜೀವಕ್ಕೆ ಪ್ರಯತ್ನ

ಮರೆತುಹೋದ ಖಾದ್ಯಗಳನ್ನು ಮರಳಿ ತಟ್ಟೆಗೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದು, ಇದಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ರಾಜ್ಯಮಟ್ಟದ ಸಿರಿಧಾನ್ಯ ಮತ್ತು ಮರೆತುಹೋದ ಪಾಕಸ್ಪರ್ಧೆಯನ್ನು ಆಯೋಜನೆ ಮಾಡಿದ್ದು, ಈ ಸ್ಪರ್ಧೆಗೆ ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದ ಮೊದಲನೇ ವಿಜೇತರು ಭಾಗವಹಿಸಿದ್ದರು ಎಂದು ಚಲುವರಾಯಸ್ವಾಮಿ ತಿಳಿಸಿದರು.

ಸಿರಿಧಾನ್ಯ ಹಬ್‌ಗೆ ಶಂಕುಸ್ಥಾಪನೆ

20 ಕೋಟಿ ರೂ. ವೆಚ್ಚದಲ್ಲಿ ಸಾವಯವ ಮತ್ತು ಸಿರಿಧಾನ್ಯ ಹಬ್‌ಗೆ ಇದೇ ಸಂದರ್ಭದಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗುತ್ತದೆ. ಮೇಳದಲ್ಲಿ 300ಕ್ಕೂ ಹೆಚ್ಚು ಮಳಿಗೆಗಳು ಇದ್ದು, ರೈತರ ಕಾರ್ಯಾಗಾರ ಆಯೋಜಿಸಲಾಗುತ್ತದೆ ಎಂದು ಕೃಷಿ ಸಚಿವರು ತಿಳಿಸಿದರು.

ಕನ್ನಡಪ್ರಭ

ಮಣ್ಣಿನ ಡಿಜಿಟಲ್ ನಕ್ಷೆ ಕುರಿತು ಇಂದಿನಿಂದ 4 ದಿನ ಕಾರ್ಯಾಗಾರ

ಮಣ್ಣಿನ ಬದಲಾವಣೆ ಕುರಿತು ಚರ್ಚೆ | 19 ರಾಷ್ಟ್ರಗಳು ಭಾಗಿ

• ಕನ್ನಡಪ್ರಭ ವಾರ್ತೆ ಬೆಂಗಳೂರು

ರಾಷ್ಟ್ರೀಯ ಮಣ್ಣು ಸರ್ವೇಕ್ಷಣಾ ಮತ್ತು ಭೂಬಳಕೆ ನಿಯೋಜನೆ ಸಂಸ್ಥೆಯಿಂದ ಜ.21ರಿಂದ 24ರವರೆಗೆ ಬೆಂಗಳೂರಿನಲ್ಲಿ ಮಣ್ಣಿನ ಡಿಜಿಟಲ್ ನಕ್ಷೆ (ಡಿಎಸ್‌ಎಂ) ಕುರಿತ ಅಂತಾರಾಷ್ಟ್ರೀಯ ಕಾರ್ಯಾಗಾರ ನಡೆಯಲಿದೆ ಎಂದು ಸಂಸ್ಥೆಯ ನಿರ್ದೇಶಕ ಡಾ। ಬಿಸ್ವಾಸ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಲಹಳ್ಳಿಯ ಗೋಕುಲಂ ಹೋಟೆಲ್‌ನಲ್ಲಿ ಕಾರ್ಯಾಗಾರ ನಡೆಯಲಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ನಾವು ಭಾರತದ ಮಣ್ಣಿನ ಡಿಜಿಟಲ್ ನಕ್ಷೆಯನ್ನು ಬಿಡುಗಡೆ ಮಾಡಿದ್ದೇವೆ. ಇದೀಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಣ್ಣಿನ ಸಂರಕ್ಷಣೆಗೆ ಕೈಗೊಂಡ ಕ್ರಮ ಹಾಗೂ ರೈತರಿಗೆ ಅನುಕೂಲ ಮಾಡಿಕೊಟ್ಟ ಬಗೆಯನ್ನು ಕಾರ್ಯಾಗಾರದಲ್ಲಿ ತಿಳಿಯಲಿದ್ದೇವೆ ಎಂದರು.

ಅಂತಾರಾಷ್ಟ್ರೀಯ ಮಣ್ಣು ಸಂರಕ್ಷಣಾ ಸಂಸ್ಥೆಯ ಚೇರ್‌ಮನ್, ಫ್ರಾನ್ಸ್‌ನ ಡಾ। ಲಾರಾ ಸೇರಿ ಇತರ ಗಣ್ಯರು ಆಗಮಿಸಲಿದ್ದಾರೆ. ರಷ್ಯಾ, ದಕ್ಷಿಣ ಆಫ್ರಿಕಾ ಸೇರಿ 19 ರಾಷ್ಟ್ರಗಳ 38 ಪ್ರತಿನಿಧಿಗಳು ಬರಲಿದ್ದಾರೆ. ಜೊತೆಗೆ ನಮ್ಮ ದೇಶದ ವಿವಿಧ ರಾಜ್ಯಗಳಿಂದ ನೂರಾರು ತಜ್ಞರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಮಣ್ಣಿನ ಗುಣಮಟ್ಟ ಹೇಗೆ ಬದಲಾಗುತ್ತಿದೆ, ವಾತಾವರಣ ಬದಲಾವಣೆಯೊಂದಿಗೆ ಮಣ್ಣು ಯಾವ ರೀತಿ ಪ್ರತಿಕ್ರಿಯಿಸುತ್ತಿದೆ, ಪೋಷಕಾಂಶಗಳ ಸ್ಥಿತಿಗತಿ, ಬೆಳೆ ಆಯ್ಕೆಗಳ ಸುಧಾರಣೆ, ಖರ್ಚನ್ನು ಕಡಿಮೆ ಮಾಡಿ ಉತ್ಪಾದಕತೆ ಹೆಚ್ಚಿಸುವ ಬಗೆ ಸೇರಿ ಹಲವು ವಿಚಾರಗಳ ಕುರಿತು ಹಾಗೂ ಮಣ್ಣಿನ ಧಾರಣ ಸಾಮರ್ಥ್ಯ, ಡಿಎಸ್ ಎಂ ಅತ್ಯಾಧುನಿಕ ತಂತ್ರಜ್ಞಾನ ಬಳಕೆ ಕುರಿತು ಗೋಷ್ಠಿ, ಸಮಾಲೋಚನೆ ನಡೆಯಲಿದೆ ಎಂದು ತಿಳಿಸಿದರು.

BENGALURU Edition
Jan 21, 2025 Page No. 05

ವಿಜಯವಾಣಿ

ನಂ.1 ಕನ್ನಡ ದಿನಪತ್ರಿಕೆ

10 ಲಕ್ಷ ಟನ್ ಸಕ್ಕರೆ ರಫ್ತಿಗೆ ಅನುಮತಿ

ನವದೆಹಲಿ: ಸೆಪ್ಟೆಂಬರ್‌ಗೆ ಅಂತ್ಯವಾಗುವ 2024-25ರ ಸೀಸನ್‌ಗೆ 10 ಲಕ್ಷ ಟನ್ ಸಕ್ಕರೆಯನ್ನು ರಫ್ತು ಮಾಡಲು ಕೇಂದ್ರ ಸರ್ಕಾರ ಸೋಮವಾರ ಅನುಮತಿ ನೀಡಿದೆ. ಉದ್ಯಮಕ್ಕೆ ಸಹಾಯ ಮಾಡುವುದು ಮತ್ತು ಸ್ಥಳೀಯ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸುವುದು ಈ ಕ್ರಮದ ಹಿಂದಿನ ಉದ್ದೇಶವಾಗಿದೆ ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಈ ಕ್ರಮದಿಂದ 50 ದಶಲಕ್ಷ ರೈತರ ಕುಟುಂಬಗಳಿಗೆ ಮತ್ತು 5 ಲಕ್ಷ ಕಾರ್ಮಿಕರಿಗೆ ಸಹಾಯವಾಗಲಿದೆ. ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಕಬ್ಬಿನ ಹಣ ಬಾಕಿ ಪಾವತಿಸಲು ಸಾಧ್ಯವಾಗಲಿದೆ. ಬೇಡಿಕೆ ಮತ್ತು ಪೂರೈಕೆ ನಡುವಿನ ಸಮತೋಲನ ಹೆಚ್ಚಾಗಿ ಗ್ರಾಹಕರಿಗೆ ಸುಲಭ ಬೆಲೆಯಲ್ಲಿ ಸಕ್ಕರೆ ದೊರೆಯಲಿದೆ ಎಂದಿದ್ದಾರೆ.

Bengaluru Edition
Jan 21, 2025 Page No. 2